<u>ಅಸಲು ದಾವಾ ಸಂಖ್ಯೆ:**- 205/2021**</u>

ಪಿ.ಡಬ್ಲ್ಯೂ**:- 1-**ಪವಿತ್ರಾನಂದ

ದಿನಾಂಕ: **17-06-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು**:-** ಪ್ರತಿವಾದಿ ಪರ ವಕೀಲರಾದ ಶ್ರೀ.ಬಿ ಎಂ ಪಿ ವಕೀಲರಿಂದ**:-:-**</u>

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯಲ್ಲಿ ಪೂರ್ ಪಶ್ಚಿಮ 12.27, ಉತ್ತರ ದಕ್ಷಿಣ 43 ಅಡಿ ವಿಸ್ತೀರ್ಣದ ಕೆಂಪು ಹಂಚಿನ ಮನೆ ಇರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಆ ರೀತಿ ಆ ಮನೆಯು ಇರುತ್ತದೆಯೇ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಮೊದಲಿಗೆ ಇತ್ತು ಈಗ ಇಲ್ಲ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯ ಉತ್ತರಕ್ಕೆ 1 ನೇ ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಆಧರಿಸುವ ದಾವಾ ಆಸ್ತಿಯಲ್ಲಿ ಒಂದು ತೆಂಗಿನ ಗಿಡವನ್ನು ಹೊರತುಪಡಿಸಿ ಯಾವುದೇ ಸ್ಥಾವರಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯಲ್ಲಿ ತಾನು ತರಕಾರಿ ಬೆಳೆಯನ್ನು ಬೆಳೆಯುವುದಾಗಿ ನುಡಿಯುತ್ತಾರೆ. ನಾನು ಆಧರಿಸುವಂತೆ ಅಲ್ಲಿ ಯಾವುದೇ ತರಕಾರಿ ಬೆಳೆಯನ್ನು ಬೆಳೆಯುವುದಿಲ್ಲ ಎಂದರೆ ಸರಿಯಲ್ಲ.

3. ಸಾಕ್ಷಿಗೆ ಈಗ ನಿಪಿ-3 ನೇದ್ದನ್ನು ತೋರಿಸಿ ಅದರಲ್ಲಿ ನಮೂದಾದ ಪ್ರಕಾರ ದಾವಾ ಆಸ್ತಿಯು ಬಸಮ್ಮ ಕೋಂ ನೀಲಕಂಠಪ್ಪ ಎನ್ನುವವರಿಗೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ ಎಂದು ಸೂಚಿಸಿದ್ದು ಸಾಕ್ಷಿಯು ಅದನ್ನು ನೋಡಿ ನಂತರ ದಾವಾ ಆಸ್ತಿಯಲ್ಲಿ ತಾವೇ ಸ್ವಾಧೀನದಲ್ಲಿರುವುದಾಗಿ ನುಡಿಯುತ್ತಾರೆ. ನಾನು ಈ ದಾವೆಯನ್ನು ಸಲ್ಲಿಸುವ ಉದ್ದೇಶಕ್ಕಾಗಿಯೇ ನಿಪಿ-3 ನೇದರಲ್ಲಿ ತಿದ್ದುಪಡಿ ಮಾಡಿ ನನ್ನ ಹೆಸರನ್ನು ಕಾನೂನು ಬಾಹಿರವಾಗಿ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೀಲಕಂಠಪ್ಪರವರು ಅವರ ಜೀವಿತಾವಧಿಯಲ್ಲಿ ದಾವಾ ಆಸ್ತಿಯನ್ನು ತನ್ನ ಪಾಲಿಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ.

4. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಕಾಣಿಸುತ್ತಿರುವ ಮನೆಯು ಪ್ರತಿವಾದಿ ಮಲ್ಲಿಕಾರ್ಜುನಪ್ಪರವರ ಮನೆ ಎಂದು ಸೂಚಿಸಿದ್ದು ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಗುರುತಿಸಿದ್ದರಿಂದ ಸದರಿ ಫೋಟೋವನ್ನು ನಿಡಿ-**1** ಎಂದು ಗುರುತಿಸಲಾಯಿತು.

5. ಅದೇ ರೀತಿ ಸಾಕ್ಷಿಗೆ ಈಗ ಇನ್ನೊಂದು ಫೋಟೋವನ್ನು ತೋರಿಸಿ ಅದರಲ್ಲಿ ಕಾಣಿಸುತ್ತಿರುವ ಆಸ್ತಿಯು ದಾವಾ ಆಸ್ತಿ ಇರುತ್ತದೆ ಎಂದು ಸೂಚಿಸಿದ್ದು ಸಾಕ್ಷಿಯು ಅದನ್ನು ನೋಡಿ ಹೌದು ಎಂದು ಒಪ್ಪಿಕೊಂಡಿದ್ದರಿಂದ ಸದರಿ ಫೋಟೋವನ್ನು ನಿಡಿ-**2** ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ಕಾಣುತ್ತಿರುವ ಮನೆಯು ಪ್ರತಿವಾದಿಯ ಮನೆ ಎಂದರೆ ಸರಿ. ಆ ಕಾರಣ ನಿಡಿ-2 ರಲ್ಲಿ ಕಾಣುತ್ತಿರುವಂತೆ ಒಂದು ತೆಂಗಿನ ಮರ ಇರುವ ಖಾಲಿ ಜಾಗ ಮಾತ್ರ ದಾವಾ ಆಸ್ತಿ ಎಂದರೆ ಸರಿ.

6. ದಾವಾ ಆಸ್ತಿಯಲ್ಲಿರುವ ನನಗೆ ಸಂಬಂಧಿಸಿದ ತೆಂಗಿನ ಗಿಡದಿಂದ ಬೀಳುವ ಕಾಯಿಗಳು ಮತ್ತು ತೆಂಗಿನ ಗರಿಗಳಿಂದ ಪ್ರತಿವಾದಿಯ ಮನೆಯ ಹಂಚು ಮತ್ತು ಶೀಟುಗಳಿಗೆ ಪದೇ ಪದೇ ಹಾನಿಯಾಗುತ್ತಿದೆ ಎಂದರೆ ಸರಿಯಲ್ಲ. ಆ ಕಾರಣ ಪ್ರತಿವಾದಿಯರು ಹಲವು ಬಾರಿ ಈ ಕುರಿತು ನನಗೆ ತಿಳಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ರೀತಿ

ಪ್ರತಿವಾದಿ ತಿಳಿಸಿದ ನಂತರ ದಾವಾ ಆಸ್ತಿಯಲ್ಲಿದ್ದ ತೆಂಗಿನ ಮರವನ್ನು ತೆಗೆಸಿದ್ದಾಗಿ ನುಡಿಯುತ್ತಾರೆ. ಆ ರೀತಿ ತೆಂಗಿನ ಗಿಡ ತೆಗೆಯಿಸಿದ ಬಗ್ಗೆ ತೋರಿಸಲು ಈ ಪ್ರಕರಣದಲ್ಲಿ ನಾನು ಯಾವುದೇ ಪೋಟೋ ಹಾಜರುಪಡಿಸಿಲ್ಲ ಎಂದರೆ ಸರಿ.

7. ನನ್ನ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ದಿಃ 15-07-2021 ರಂದು ಪ್ರತಿವಾದಿಯು ದಾವಾ ಆಸ್ತಿಗೆ ಬಂದು ಅದರ ವಹಿವಾಟಿಗೆ ನನಗೆ ತೊಂದರೆ ಉಂಟು ಮಾಡಿದ್ದನು ಎಂದು ಸುಳ್ಳು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿರುವ ನನಗೆ ಸೇರಿದ ತೆಂಗಿನ ಮರದಿಂದ ಪ್ರತಿವಾದಿಗೆ ಸಾಕಷ್ಟು ತೊಂದರೆಯಾಗುತ್ತಿದ್ದರು ಸಹ ಅವರು ಅದನ್ನು ಸಹಿಸಿಕೊಂಡಿದ್ದರು ಸಹ ಪ್ರತಿವಾದಿಗೆ ತೊಂದರೆಕೊಡಬೇಕೆಂದು ನಾನು ಸುಳ್ಳು ವ್ಯಾಜ್ಯಾ ಕಾರಣ ತೋರಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯಲ್ಲಿ ನಾನು ಆಧರಿಸುವಂತೆ ಸ್ವಾಧೀನತೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಹೀಗಿದ್ದರೂ ಸುಳ್ಳು ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.